ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ,
ಭೂಮಾಪನ ಕಂದಾಯ ವ್ಯವಸ್ಥೆ
ಮತ್ತು ಭೂದಾಖಲೆಗಳ ಇಲಾಖೆ,
ಕೆ.ಆರ್. ವೃತ್ತ, ಬೆಂಗಳೂರು-560 001
☎:: 91-080-22212408
ಫ್ಯಾಕ್ಸ್: 91-080-22277528

ಸಂಖ್ಯೆ: ಸಿಬ್ಬಂದಿ/ನೇಮಕಾತಿ.164/2010-2011 ದಿನಾಂಕ 11-01-2013

# ಪ್ರಕಟಣೆ

ಈ ಮೂಲಕ ನಿಮಗೆ ತಿಳಿಯಪಡಿಸುವುದೇನೆಂದರೆ, ಇಲಾಖೆಯಲ್ಲಿ ಖಾಲಿ ಇರುವ ಭೂಮಾಪಕರ ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿ ಮಾಡುವ ಸಂಬಂಧ ನಡೆಸಲಾದ ಸ್ಪರ್ಧಾತ್ಮಕ ಪರೀಕ್ಷೆಯ ಫಲಿತಾಂಶದ ಆಧಾರದ ಮೇಲೆ ಪ್ರಕಟಿಸಲಾದ ತಾತ್ಕಾಲಿಕ / ಹೆಚ್ಚುವರಿ ಆಯ್ಕೆ ಪಟ್ಟಿಯಲ್ಲಿನ ಅಭ್ಯರ್ಥಿಗಳ ಚಾರಿತ್ರ್ಯ ಹಾಗೂ ನಡವಳಿಕೆ ಕುರಿತು ಪರಿಶೀಲನಾ ವರದಿಯನ್ನು ಪಡೆಯಲು ದಿನಾಂಕ: 10-1-2013 ರಂದು ಪೋಲೀಸ್ ಇಲಾಖೆಯೊಂದಿಗೆ ಪತ್ರ ವ್ಯವಹರಿಸಲಾಗಿದೆ. ಸದರಿ ವರದಿಯನ್ನು ನೀಡಲು ಪೋಲೀಸ್ ಇಲಾಖೆಯವರು ಈ ಕೆಳಕಂಡ ದಾಖಲೆಗಳ ಅಗತ್ಯತೆ ಇರುವುದು ಕಂಡುಬಂದಿದೆ.

1. ನಿಮ್ಮ ಇತ್ತೀಚಿನ 02 ಭಾವಚಿತ್ರ
2. ಹುಟ್ಟಿದ ದಿನಾಂಕ ಮತ್ತು ವಾಸಸ್ಥಳ ಖಾತರಿಪಡಿಸುವ ದಾಖಲೆಗಳು

ಆದುದರಿಂದ ನಿಮ್ಮ ಜಿಲ್ಲಾ ವ್ಯಾಪ್ತಿಯಲ್ಲಿನ ಪೋಲೀಸ್ ಆಯುಕ್ತರು / ಅಧೀಕ್ಷಕರುಗಳ ಕಛೇರಿಗಳಿಗೆ ಖುದ್ದಾಗಿ ಹಾಜರಾಗಿ, ಮೇಲ್ಕಂಡ ದಾಖಲೆಗಳನ್ನು ಹಾಗೂ ಪೋಲೀಸ್ ಇಲಾಖೆಯವರು ಕೋರುವ ಇತರೆ ಮಾಹಿತಿ / ದಾಖಲೆಗಳನ್ನು ಒದಗಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ಚಾರಿತ್ರ್ಯ ಹಾಗೂ ನಡವಳಿಕೆ ಕುರಿತು ಪರಿಶೀಲನಾ ವರದಿಯನ್ನು ಈ ಕಛೇರಿಯಲ್ಲಿ ಸ್ವೀಕರಿಸದೆ ಇದ್ದಲ್ಲಿ, ನಿಮ್ಮ ಅಭ್ಯರ್ಥಿತ್ವವನ್ನು ಕೈಬಿಡಲಾಗುವುದೆಂದು ಈ ಮೂಲಕ ತಿಳಿಸಿದೆ.

ಅಧ್ಯಕ್ಷರು,
ನೇಮಕಾತಿ ಸಮಿತಿ ಹಾಗೂ ಆಯುಕ್ತರು,
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು
ಭೂದಾಖಲೆಗಳು, ಬೆಂಗಳೂರು.